# PARAMPARIKA KOOTA
# MYSORE PALACE VISIT

**01-Jan-2020**





**“ವಿಶ್ವವಿಖ್ಯಾತ ಮೈಸೂರಿನ ಅಂಬಾವಿಲಾಸ ಅರಮನೆಗೆ ಭೇಟಿ”**

ದಿನಾಂಕ:01.01.2020ರ ಬುಧವಾರದಂದು ಪ್ರಾಚ್ಯವಸ್ತು ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯ ಅನುದಾನದಿಂದ “ಪರಂಪರೆ ಕೂಟ” ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ನಮ್ಮ ಕಾಲೇಜಿನ ಸುಮಾರು 100 ವಿದ್ಯಾರ್ಥಿಗಳು ಹಾಗೂ 4 ಪ್ರಾಧ್ಯಾಪಕರನ್ನೊಳಗೊಂಡ ತಂಡವು ಮೈಸೂರು ಒಡೆಯರುಗಳ ಆಳ್ವಿಕೆಯ ಪರಂಪರೆ ಹಾಗೂ ಭವ್ಯ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಮೈಸೂರಿನ ಕೇಂದ್ರಬಿಂದುವಾದ ಅಂಬಾವಿಲಾಸ ಅರಮನೆಗೆ ಭೇಟಿ ನೀಡಿಲಾಗಿತ್ತು.

ಅರಮನೆಯ ಭೇಟಿಯಲ್ಲಿ ಮೈಸೂರು ಅರಮನೆಯ ಒಳಾಂಗಣ ವಾಸ್ತುಶಿಲ್ಪ, ಪೀಠೋಪಕರಣಗಳು, ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಕಿಟಕಿ ಹಾಗೂ ಬಾಗಿಲುಗಳು, ಅರಮನೆಯ ಭವ್ಯ ಪರಂಪರೆ, ವಿಶ್ವವಿಖ್ಯಾತ ದಸರಾ ಕಾರ್ಯಕ್ರಮದಲ್ಲಿ ಆಕರ್ಷಣೆಯ ಕೇಂದ್ರಬಿಂದುವಾದ ಚಿನ್ನದ ಅಂಬಾರಿ, ಮೈಸೂರು ಒಡೆಯರುಗಳ ಆಳ್ವಿಕೆಯ ಪರಂಪರೆ, ಮರದಲ್ಲಿ ನಿರ್ಮಿಸಿದ್ದ ಹಳೆಯ ಅರಮನೆಯ ಚಿತ್ರಗಳು, ಅರಸರುಗಳ ತೈಲವರ್ಣ ಚಿತ್ರಗಳು, ಅರಮನೆಯ ನೀಲನಕ್ಷೆ, ದರ್ಬಾರ್ ಹಾಲ್, ಅರಸರುಗಳು ಉಪಯೋಗಿಸುತ್ತಿದ್ದ ಪರಿಕರಗಳು ಹಾಗೂ ಮೈಸೂರು ಮಹಾರಾಜ ಕುಟುಂಬದ ಸಾಂಸ್ಕೃತಿಕ ಪರಿಕಲ್ಪನೆಗಳ ಬಗೆಗೆ ತಿಳಿದುಕೊಂಡಿರುತ್ತಾರೆ. ನಮ್ಮ ವಿದ್ಯಾರ್ಥಿಗಳಿಗೆ ಇಂಡೋ ಇಸ್ಲಾಮಿಕ್ ಶೈಲಿಯ ಬಗೆಗಿನ ಉದಾಹರಣೆಗೆ ಮೈಸೂರು ಅರಮನೆ ಜೀವಂತ ನಿದರ್ಶನವಾಗಿರುತ್ತದೆ.

ನಮ್ಮ ಭೇಟಿಯ ಸಂದರ್ಭದಲ್ಲಿ ಅರಮನೆಯ ಆಡಳಿತ ಮಂಡಳಿಯ ವತಿಯಿಂದ ಆಯೋಜಿಸಲಾಗ್ದಿ ಮಾಗಿ ಉತ್ಸವದ ಪ್ರಯುಕ್ತ ಫಲಪುಷ್ಪ ಪ್ರದರ್ಶನವನ್ನೂ ಸಹ ವೀಕ್ಷಿಸಲಾಯಿತು. ಅರಮನೆ ಭೇಟಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಪಹಾರ ವ್ಯವಸ್ಥೆಗೆ ಸಹಕಾರ ನೀಡಿದ ಪ್ರಾಚ್ಯವಸ್ತು ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ, ಮೈಸೂರು ಹಾಗೂ ಅರಮನೆ ಆಡಳಿತ ಮಂಡಳಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು.